**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆ: ಸ್ಪೆಷಲ್ ಕೇಸ್ *127/2022*</u>**

**ದಿನಾಂಕ: *11.01.2024***
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾ: *2* (ಚಾ.ಸಾ.*6*)**

| | | |
|---|---|---|
| ಹೆಸರು | : | ನಾಗರಾಜು |
| ತಂದೆಯ ಹೆಸರು | : | ಅರಸಯ್ಯ |
| ವಯಸ್ಸು | : | *52* ವರ್ಷ |
| ಉದ್ಯೋಗ | : | ಕಂದಾಯ ನಿರೀಕ್ಷಕರು, ರಾಮನಗರ ಕಸಬಾ ಹೋಬಳಿ |
| ವಾಸ ಸ್ಥಳ | : | **ಚನ್ನಪಟ್ಟಣ** |

**<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಅಭಿಯೋಜಕರಿಂದ:</u>**

*2001* ರಿಂದ ನಾನು ರಾಮನಗರ ಕಸಬಾ ಹೋಬಳಿ, ಕಂದಾಯ ನಿರೀಕ್ಷಕನಾಗಿ ನಾನು ಕರ್ತವ್ಯ ನಿರ್ವಹಿಸಿಸುತ್ತಿದ್ದೇನೆ.

*2.* ದಿ: *24.05.2022* ರಂದು ಮಧ್ಯಾಹ್ನ *12.00* ಗಂಟೆಗೆ ತಹಸೀಲ್ದಾರ್, ರಾಮನಗರ ರವರು ಫೋನ್ ಮಾಡಿ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗುವಂತೆ ತಿಳಿಸಿದರು. ಅದರಂತೆ ನಾನು, ನಮ್ಮ ಗ್ರಾಮ ಸಹಾಯಕ ಚಾಸಾ *7* ರಂಗಸ್ವಾಮಿ ಗ್ರಾಮಾಂತರ ಪೊಲೀಸ್ ಠಾಣೆ, ರಾಮನಗರಕ್ಕೆ ಹೋದೆವು.

*3.* ಬಸವನಪುರ ಗೇಟ್ ಹತ್ತಿರ ಯಾರೋ ದುಷ್ಕರ್ಮಿಗಳು ಗಾಂಜಾ ಮಾರಾಟ ಮಾಡುತ್ತಿದಾರೆ, ದಾಳಿ ಮಾಡಲು ಹೋಗಬೇಕು, ನೀವು ಪಂಚರಾಗಿ ಸಹಕರಿಸುವಂತೆ ಹೇಳಿ ನೋಟಿಸ್ ಕೊಟ್ಟರು. ಸಾಕ್ಷಿ ಗುರುತಿಸಿದ ನೋಟಿಸ್ ನ್ನು ನಿಪಿ *1* ಎಂದು, ಸಾಕ್ಷಿಯ ಸಹಿಯನ್ನು ನಿಪಿ *1* (ಎ) ಎಂದು ಗುರುತಿಸಲಾಯಿತು.

*4.* ನಂತರ ಚಾಸಾ *1* ನರಸಿಂಹಮೂರ್ತಿ ರವರು ನನ್ನನ್ನು, ಚಾಸಾ *8* ರಂಗಸ್ವಾಮಿ ಮತ್ತು ಪೊಲೀಸ್ ಸಿಬ್ಬಂದಿ ರವರನ್ನು ಕರೆದುಕೊಂಡು ಇಲಾಖಾ

ಜೀಪ್ ನಲ್ಲಿ ತಹಸೀಲ್ದಾರ್ ಕಛೇರಿಗೆ ಮಧ್ಯಾಹ್ನ *12.15* ಗಂಟೆಗೆ ಹೋದೆವು. ಚಾಸಾ *1* ರವರು ತಹಸೀಲ್ದಾರ್ ರವರನ್ನು ಬರುವಂತೆ ತಿಳಿಸಿದರು. ನಾವು ಪೊಲೀಸ್ ಜೀಪ್ ನಲ್ಲಿ ಮತ್ತು ತಹಸೀಲ್ದಾರ್ ಅವರ ಜೀಪಿನಲ್ಲಿ ಬಸವನಪುರ ರೈಲ್ವೆ ಗೇಟ್ ಹತ್ತಿರ ಹೋದೆವು. ಗೇಟ್ ನಿಂದ ಮೇನ್ ರೋಡ್ ಕಡೆಗೆ ಇಬ್ಬರು ಆಸಾಮಿಗಳು ನಿಂತಿದ್ದರು. ಸ್ವಲ್ಪ ನಿಂತುಕೊಂಡು ಅವರನ್ನು ನೋಡುತ್ತಿದೆವು.

*5.* ಸದರಿ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಗಳಿರುತ್ತಾರೆ. ಅವರಲ್ಲಿ ಒಂದನೇ ಆರೋಪಿ ಬಿಗ್ನೆಸ್ ಬೆನ್ನಿಗೆ ಒಂದು ಬ್ಯಾಗ್ ಹಾಕಿಕೊಂಡು ನಿಂತಿದ್ದ. ಅನುಮಾನದಿಂದ ಆರೋಪಿತರನ್ನು ಪೊಲೀಸ್ ಸಿಬ್ಬಂದಿಯವರು ಸುತ್ತುವರೆದು ಹಿಡಿದುಕೊಂಡರು. ಅವರನ್ನು ವಿಚಾರಿಸಿದಾಗ ಅವರ ಹೆಸರು ಬಿಗ್ನೆಸ್ ಮತ್ತು ಬಿನಯ್ ಕುಮಾರ್ ಎಂದು ಹಿಂದಿ ಭಾಷೆಯಲ್ಲಿ ತಿಳಿಸಿದರು. ಬ್ಯಾಗ್ ನಲ್ಲಿ ಏನು ಇದೆ ಎಂದು ಪೊಲೀಸರು ಕೇಳಿದರು ಮತ್ತು ಪೊಲೀಸನವರು ಬ್ಯಾಗ್ ನ್ನು ತೆಗೆದು ನೋಡಿದಾಗ, ಅದರಲ್ಲಿ *2* ಕಪ್ಪು ಪ್ಲಾಸ್ಟಿಕ್ ಕವರ್ ಇದ್ದವು. ಅವುಗಳನ್ನು ಒಪನ್ ಮಾಡಿ ನೋಡಿದಾಗ ಅದರಲ್ಲಿ ಗಾಂಜಾ ಇತ್ತು, ಗಾಂಜಾ ವಾಸನೆ ಬರುತ್ತಿತ್ತು.

*6.* ಸದರಿ ಗಾಂಜಾ ಕವರುಗಳು ತಲಾ ಒಂದೊಂದು ಕೆ.ಜಿ. ಇತ್ತು. ಅದನ್ನು ಜೀಪನಲ್ಲಿದ್ದ ತೂಕದ ಯಂತ್ರದಿಂದ ತೂಕ ಮಾಡಿದಾಗ ತಲಾ ಒಂದೊಂದು ಕೆ.ಜಿ. ಇತ್ತು. ಅದನ್ನು ಪೊಲೀಸ್ ನವರು ಮಹಜರ್ ಮಾಡಿ *2* ಬಿಳಿ ಕವರ್ ಗಳಲ್ಲಿ ಹಾಕಿ, ಬಾಯಿ ಕಟ್ಟಿ ಆರ್ ಎಂಬ ಅಕ್ಷರದ ಸೀಲ್ ನಿಂದ ಸೀಲ್ ಮಾಡಿ ಅಮಾನತ್ತು ಪಡಿಸಿಕೊಂಡರು. ಸಾಕ್ಷಿ ಗುರುತಿಸಿದ ಬ್ಯಾಗ್ ನ್ನು ಮು.ಮಾ.*1* ಎಂದು ಗುರುತಿಸಲಾಗಿದೆ. ಮಹಜರ್ ನ್ನು ನಿಪಿ *2* ಎಂದು, ಸಾಕ್ಷಿಯ ಸಹಿಯನ್ನು ನಿಪಿ *2 (ಎ)* ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಟಿ.ಜಿ., ವಕೀಲರಿಂದಃ**

*7.* ತಹಸೀಲ್ದಾರ್ ರವರು ನನಗೆ ಯಾವುದೇ ಲಿಖಿತ ಆದೇಶ ಕೊಟ್ಟಿಲ್ಲ ಎಂದರೆ ಸರಿ. ತಹಸೀಲ್ದಾರ್ ನನಗೆ ಮಧ್ಯಾಹ್ನ *12.00* ಗಂಟೆಗೆ ಫೋನ್ ಮಾಡಿ

ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗುವಂತೆ ತಿಳಿಸಿದರು. ಠಾಣೆಯಿಂದ ಬಸವನಪುರ ಗೇಟ್ ಸುಮಾರು *5* ಕಿ.ಮೀ. ದೂರ ಇದೆ ಎಂದರೆ ಸರಿ. ಸದರಿ ಬಸವನಪುರ ಗೇಟ್ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿದೆ ಎಂದರೆ ಸರಿ. ಬಸವನಪುರ ಗೇಟ್ ನಿಂದ ರೈಲ್ವೆ ಗೇಟ್ ಸುಮಾರು *200* ಮೀ. ದೂರ ಇದೆ. ಸ್ವಲ್ಪ ದೂರ ಹೋದರೆ ಬಸವನಪುರ ಗ್ರಾಮ ಬರುತ್ತದೆ ಎಂದರೆ ಸರಿ. ಸದರಿ ಗೇಟ್ ಹತ್ತಿರ ರೈಲ್ವೆ ಸಿಬ್ಬಂದಿ ಇರುತ್ತಾರೆ ಎಂದರೆ ಸರಿ. ಬಸವನಪುರ ಬಸ್ ಸ್ಟಾಪ್ ನಿಂದ ರೈಲ್ವೆ ಗೇಟ್ ವರೆಗೆ ಎಡಬದಿಯಲ್ಲಿ ಸಾಕಷ್ಟು ಮನೆಗಳಿವೆ ಎಂದರೆ ಸರಿಯಲ್ಲ. ಗೇಟ್ ನ ಮೇಲ್ಭಾಗದಲ್ಲಿ ಬಸ್ ಸ್ಟಾಪ್ ಹತ್ತಿರ ಮನೆಗಳಿವೆ ಎಂದರೆ ಸರಿ.

*8.* ನಾವು ಜೀಪ್ ನಿಲ್ಲಿಸಿದ ಸ್ಥಳದ ಚಕ್ಕುಬಂಧಿ ಹೇಳಲು ಆಗುವುದಿಲ್ಲ. ಆರೋಪಿ ಹಿಡಿದುಕೊಂಡ ಬ್ಯಾಗ್ ಮು.ಮಾ.*1* ಎಂದು ತೋರಿಸಲಿಕ್ಕೆ ಯಾವುದೇ ನಿರ್ಧಿಷ್ಟವಾದ ಗುರುತು ಇಲ್ಲ ಎಂದರೆ ಸರಿಯಲ್ಲ. ನಮ್ಮನ್ನು ನಾವು ಅಂಗಶೋಧನೆ ಮಾಡಿಕೊಂಡೆವು. ನಾನು ಮೊದಲು ಗಾಂಜಾ ಸೊಪ್ಪನ್ನು ನೋಡಿಲ್ಲ ಎಂದರೆ ಸರಿ. ಅದು ಗಾಂಜಾ ಸೊಪ್ಪೋ ಅಲ್ಲವೋ, ಎಂಬುದು ಗೊತ್ತಿಲ್ಲ ಎಂದರೆ, ವಾಸನೆ ಬರುತ್ತಿತ್ತು. ಮೊದಲು ಒಂದು ಕೇಸಿನಲ್ಲಿ ಗಾಂಜಾ ಸೊಪ್ಪಿನ ವಾಸನೆಯನ್ನು ಪಡೆದುಕೊಂಡಿದೆ.

*9.* ಪೊಲೀಸರು ಕವರ್ ಸಮೇತ ಗಾಂಜಾ ಸೊಪ್ಪನ್ನು ತೂಕ ಮಾಡಿದಾರೆ ಎಂದರೆ ಸರಿ. ಅದರಲ್ಲಿದ್ದ ಬೀಜ, ಸೊಪ್ಪು, ಕಡ್ಡಿ, ಹೂ, ಹಣ್ಣು ಇವುಗಳನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ ಎಂದರೆ ಸರಿ. ಅಕ್ಕಪಕ್ಕದ ಸುಮಾರು *5-6* ಜನ ಇದ್ದರು. ಪೊಲೀಸರು ಅವರ ಸಹಿಗಳನ್ನು ಪಂಚನಾಮೆಯಲ್ಲಿ ತೆಗೆದುಕೊಂಡಿಲ್ಲ. ಗಾಂಜಾ ಖರೀದಿ ಮಾಡಲು ಯಾರು ಬಂದಿರಲಿಲ್ಲ.

*10.* ಮಹಜರ್ ಮುಗಿದ ಮೇಲೆ ಪೊಲೀಸರು ಸೀಲ್ ನ್ನು ತಮ್ಮ ಜೊತೆ ಒಯ್ದರು. ಮು.ಮಾ. *1* ರ ಮೇಲೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿ. ಪೊಲೀಸರು ಲ್ಯಾಪ್ ಟ್ಯಾಪ್ ತಂದು ಟೈಪ್ ಮಾಡಿ ಸ್ಥಳದಲ್ಲಿ ಪ್ರಿಂಟ್ ತೆಗೆದರು. ತಹಸೀಲ್ದಾರ್ ರವರು ತಮ್ಮ ಸಹಿ ಕೆಳಗೆ ಸ್ಥಳದಲ್ಲಿ ಸೀಲ್

ಹಾಕಿರುತ್ತಾರೆ. ನಿಪಿ *1* ಮಹಜರ್ ನಲ್ಲಿ ತಹಸೀಲ್ದಾರ್ ರವರ ಸಹಿ ಇಲ್ಲ ಎಂದರೆ, ಚಿಕ್ಕ ರುಜು ಮಾಡಿರುತ್ತಾರೆ. ನನ್ನ ಮುಂದೆ ತಹಸೀಲ್ದಾರ್ ರವರು ಸಹಿ ಹಾಕಿ, ಸೀಲ್ ಹಾಕುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

*11.* ಆರೋಪಿತರಿಗೆ ಒರಿಯಾ ಭಾಷ್ಷೆ ಬಿಟ್ಟು, ಬೇರೆ ಕನ್ನಡ, ಇಂಗ್ಲೀಷ್ ಭಾಷೆ ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹಿಂದಿ ಭಾಷೆ ಮಾತನಾಡುತ್ತಿದ್ದರು. ನಾವು ಸ್ಥಳಕ್ಕೆ ಹೋಗಿಲ್ಲ, ಪೊಲೀಸರು ತಯಾರಿಸಿದ ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

*12.* ನನಗೆ ಹಿಂದಿ ಮತ್ತು ಒರಿಯಾ ಭಾಷೆ ಬರುವುದಿಲ್ಲ ಎಂದರೆ ಸರಿ. ಆರೋಪಿಗಳು ಯಾವುದೇ ಗಾಂಜಾ ಹೊಂದಿರಲಿಲ್ಲ, ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**